Phone: 08282-257424
E-Mail: kuhrmsection@gmail.com

Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451
**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ: ಕುವಿ: ಮಾಸನಿ–7/4753/2017–18 ದಿನಾಂಕ:29–11–2017

## ಅಧಿಸೂಚನೆ

ವಿಷಯ: ದಿನಾಂಕ:02–12–2017 ರಂದು ಈದ್–ಮಿಲಾದ್ ಹಬ್ಬದ ರಜೆ ಮತ್ತು ಘಟಿಕೋತ್ಸವ ಹಿನ್ನೆಲೆಯಲ್ಲಿ ರಜೆ ಘೋಷಿಸುವ ಕುರಿತು

ಉಲ್ಲೇಖ:
1. ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುವಿ:ಮಾಸನಿ–7:2016–17 :4853:ದಿನಾಂಕ: 07/08–12–2016
2. ಸರ್ಕಾರದ ಅಧಿಸೂಚನೆ-1ರ ಸಂಖ್ಯೆ:ಸಿಆಸುಇ 58 ಹೆಚ್‌ಹೆಚ್‌ಎಲ್ 2017 ದಿನಾಂಕ: 27–11–2017
3. ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುವಿ:ಯುಎಟಿ-2(ಘಟಿ–28) :385:2017–18 ದಿನಾಂಕ: 13–11–2017
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29–11–2017

****

ವಿಶ್ವವಿದ್ಯಾಲಯದ ಉಲ್ಲೇಖ (1)ರ ಅಧಿಸೂಚನೆಯಲ್ಲಿ 2017ನೇ ಸಾಲಿನ ಸಾರ್ವತ್ರಿಕ ಹಾಗೂ ಪರಿಮಿತ ರಜಾ ದಿನಗಳ ಪಟ್ಟಿಯನ್ನು ಪ್ರಕಟಿಸಿ, ದಿನಾಂಕ: 01–12–2017ರ ಶುಕ್ರವಾರದಂದು ಈದ್–ಮಿಲಾದ್ ಹಬ್ಬದ ಪ್ರಯುಕ್ತ ಸಾರ್ವತ್ರಿಕ ರಜೆ ಎಂದು ಘೋಷಿಸಲಾಗಿತ್ತು.

ಆದರೆ ಉಲ್ಲೇಖ (02)ರ ಸರ್ಕಾರದ ಅಧಿಸೂಚನೆ-1ರಲ್ಲಿ ದಿನಾಂಕ: 01–12–2017ರ ಸಾರ್ವತ್ರಿಕ ರಜೆಯನ್ನು ರದ್ದುಪಡಿಸಿ, ದಿನಾಂಕ: 02–12–2017ಕ್ಕೆ ರಜೆ ಘೋಷಣೆ ಮಾಡಿರುವುದರಿಂದ ವಿಶ್ವವಿದ್ಯಾಲಯವು ಸಹ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಗಳು/ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಶಂಕರಘಟ್ಟ/ಘಟಕ ಕಾಲೇಜುಗಳು/ನೇರ ಆಡಳಿತಕ್ಕೊಳಪಟ್ಟ ಕಾಲೇಜು, ಸ್ನಾತಕೋತ್ತರ ಕೇಂದ್ರ ಕಡೂರು/ಚಿಕ್ಕಮಗಳೂರು ಮತ್ತು ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ ಇವುಗಳಿಗೆ ದಿನಾಂಕ:01–12–2017ರ ಬದಲಾಗಿ ದಿನಾಂಕ:02–12–2017ರ ಶನಿವಾರದಂದು ಈದ್–ಮಿಲಾದ್ ಹಬ್ಬದ ಪ್ರಯುಕ್ತ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ. ದಿನಾಂಕ:01–12–2017 ರಂದು ಕಛೇರಿ/ವಿಭಾಗಗಳು ಎಂದಿನಂತೆ ಕಾರ್ಯ ನಿರ್ವಹಿಸುವುದು.

ದಿನಾಂಕ: 02–12–2017 ರಂದು ಸಾರ್ವತ್ರಿಕ ರಜೆ ಘೋಷಣೆಯಾಗಿದ್ದಾಗ್ಯೂ ಸಹ ಉಲ್ಲೇಖ (03)ರಲ್ಲಿ ಪೂರ್ವನಿಯೋಜಿತವಾಗಿ 28ನೇ ವಾರ್ಷಿಕ ಘಟಿಕೋತ್ಸವ ಏರ್ಪಡಿಸಿರುವುದರಿಂದ, ಈ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಬೋಧಕ/ಬೋಧಕೇತರ ನೌಕರರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಲಾಗಿದೆ.

ದಿನಾಂಕ:02–12–2017 ರಂದು 28ನೇ ಘಟಿಕೋತ್ಸವದಲ್ಲಿ ನೌಕರರುಗಳು ಕಾರ್ಯ ನಿರ್ವಹಿಸಿರುವ ಪ್ರಯುಕ್ತ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯ ಎಲ್ಲಾ ಆಡಳಿತ ಕಾರ್ಯಾಲಯಗಳಿಗೆ ಹಾಗೂ ಸ್ನಾತಕೋತ್ತರ ವಿಭಾಗಗಳಿಗೆ ದಿನಾಂಕ: 04–12–2017 ರಂದು ರಜೆ ಘೋಷಿಸಲಾಗಿದೆ. ಸದರಿ ದಿನದಂದು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು/ನೇರ ಆಡಳಿತಕ್ಕೊಳಪಟ್ಟ ಕಾಲೇಜು, ಸ್ನಾತಕೋತ್ತರ ಕೇಂದ್ರ ಕಡೂರು/ಚಿಕ್ಕಮಗಳೂರು ಮತ್ತು ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ ಇವುಗಳು ಎಂದಿನಂತೆ ಕೆಲಸ ನಿರ್ವಹಿಸುವುದು.

ಆದೇಶದ ಮೇರೆಗೆ

Bitharama. 29/11/17

ಸಹಾಯಕ ಕುಲಸಚಿವ
ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ

ಗೆ:

1. ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ/ ಶಿವಮೊಗ್ಗ/ ಕಡೂರು/ಚಿಕ್ಕಮಗಳೂರು.
4. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
5. ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
6. ಸಹ್ಯಾದ್ರಿ ವಿಜ್ಞಾನ / ಸಹ್ಯಾದ್ರಿ ಕಲಾ / ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜುಗಳ ಪ್ರಾಚಾರ್ಯರುಗಳಿಗೆ, ಶಿವಮೊಗ್ಗ.

—2